ಹಾಗೆ ಕ್ರಮ ಕೈಗೊಳ್ಳುವುದು ಅತಿ ಮುಖ್ಯವೆಂದು ನಾನು ಬೆಳಿಗ್ಗೆಯೇ ಹೇಳಿದ್ದೇನೆ.

3) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಿದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರಚಾರ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ದಿನಾಂಕ: 20ನೇ ಆಗಸ್ಟ್ 1996ರಂದು ಉತ್ತರಿಸುವ 25ನೇ ಪಟ್ಟಿಯಲ್ಲಿನ 73 ಪ್ರಶ್ನೆಗಳ ಪೈಕಿ 65 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ:- ಹುಬ್ಬಳ್ಳಿಯ ಶ್ರೀ ಸಿದ್ದರೂಢ ಮಠದ ಟ್ರಸ್ಟ್‌ನ ಬೈಲಾ ತಿದ್ದುಪಡಿ.

1413 (1450) ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ):- ಮಾನ್ಯ ಮುಜರಾಯಿ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ದೇವಾಲಯಗಳನ್ನು ನೊಂದಾಯಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು?)

ಆ) ಧಾರವಾಡ, ಬೆಳಗಾಂ ಜಿಲ್ಲೆಗಳಲ್ಲಿಯ ಎಷ್ಟು ದೇವಲಾಯಗಳಿಗೆ ಸರ್ಕಾರದಿಂದ 1995-96ನೇ ಸಾಲಿನ ಅನುದಾನ ಹಣ ದೊರೆತಿದೆಯೇ? ಹಾಗಿದ್ದಲ್ಲಿ ಎಷ್ಟು ಅನುದಾನ ನೀಡಲಾಗಿದೆ?

ಇ) ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠದ ಟ್ರಸ್ಟ್ ವಿಷಯದ 'ಬೈಲಾ' ತಿದ್ದುಪಡಿಗಾಗಿ ಸರ್ಕಾರ ದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):-

ಅ) ಧಾರ್ಮಿಕ ಮತ್ತು ದತ್ತಿ ಇಲಾಖೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ 5 ವಿವಿಧ ಕಾಯ್ದೆಗಳಡಿಯಲ್ಲಿ ದಿ ಬಾಂಬೆ ಪಬ್ಲಿಕ್ ಟ್ರಸ್ಟ್ ಕಾಯ್ದೆ 1950ರಲ್ಲಿ ಮಾತ್ರ ದೇವಾಲಯಗಳನ್ನು ನೋಂದಣಿ ಮಾಡಲು ಅವಕಾಶವಿರುತ್ತದೆ. ಸದರಿ ಕಾಯ್ದೆಯ ಅಡಿಯಲ್ಲಿ ನೋಂದಾಯಿಸಲಾದ ಒಟ್ಟು ದೇವಾಲಯಗಳು – 9555.

ಜಿಲ್ಲಾವಾರು ವಿವರ ಈ ಕೆಳಕಂಡಂತೆ ಇದೆ:-

ಬೆಳಗಾಂ	3641	ಬಿಜಾಪುರ	1875
ಧಾರವಾಡ	3250 ಮತ್ತು	ಉತ್ತರ ಕನ್ನಡ	789 ದೇವಾಲಯಗಳು,

ಜಿಲ್ಲೆಗಳು	ಸಂಸ್ಥೆಗಳು	ದುರಸ್ಥಿ ಜೀರ್ಣೋದ್ಧಾರ ರೂ.	ಸಂಸ್ಥೆಗಳು	ನಿರ್ಮಾಣ ರೂ.	ಒಟ್ಟು ಮೊತ್ತ ರೂ.	ಒಟ್ಟು ಸಂಸ್ಥೆಗಳು
1) ಧಾರವಾಡ	52	12,02,500	74	17,50,000	29,52,500	126
2) ಬೆಳಗಾಂ	35	9,66,000	48	14,50,000	24,16,000	83

ಶ್ರೀ ಸಿದ್ಧರೂಢ ಮಠದ ಟ್ರಸ್ಟ್‌ಗೆ ಸ್ಕೀಂನ್ನು ದಿನಾಂಕ: 22-4-50ರಲ್ಲಿ ರಚಿಸಲಾಗಿದೆ. ಸದರಿ ಸ್ಕೀಂ ರೀತ್ಯ ತಿದ್ದುಪಡಿ ಮಾಡುವ ಅಧಿಕಾರವು ಜಿಲ್ಲಾ ನ್ಯಾಯಾಲಯ, ಧಾರವಾಡ ಅವರಲ್ಲಿ ಇರುತ್ತದೆ. ಇದರಲ್ಲಿ ಸರ್ಕಾರ ಮಧ್ಯ ಪ್ರವೇಶಿಸಲು ಬರುವುದಿಲ್ಲ.

ವಿಷಯ:- ಸರ್ವೇಯರ್‌ಗಳ ಕೊರತೆ.

1414 (2262) **ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ):-** ಮಾನ್ಯ ಕಂದಾಯ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್‌ಹುಕ್ಕಂ ಸಾಗುವಳಿ ಮಂಜೂರಾತಿ ಮಾಡಲು ಸ್ಥಳ ಸರ್ವೇ ಮಾಡಲು ಮೋಜಣಿದಾರರ ಕೊರತೆಯಿಂದ ತಡೆಯುಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಸರ್ವೇ ಮಾಡದೇ ಕೇವಲ ರೆವಿನ್ಯೂ ಸ್ಕೆಚ್ ಪ್ರಕಾರ ಮಂಜೂರು ಮಾಡಲು ತಾಲ್ಲೂಕು ಮಟ್ಟದ ಬಗರ್‌ಹುಕುಂ ಸಾಗುವಳಿ ಮಂಜೂರಾತಿ ಸಮಿತಿಗೆ ಇದೆಯೇ?

ಇ) ಇದ್ದಲ್ಲಿ ಆ ರೀತಿ ಅಂದಾಜಿನ ರೆವಿನ್ಯೂ ಸ್ಕೆಚ್‌ನಂತೆ ಮಂಜೂರಾದ ಜಮೀನಿಗೆ ಸಾಗುವಳಿ ಚೀಟಿಕೊಟ್ಟಲ್ಲಿ ಸರ್ವೇ ನಂತರ ಆಗುವ ವ್ಯತ್ಯಾಸವನ್ನು ಸರಿಪಡಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆಯೇ?

ಶ್ರೀ ರಮೇಶ್ ಜಿಗಜಿಣಗಿ (ಕಂದಾಯ ಸಚಿವರು):-

ಅ) 934 ಜನ ಸರ್ವೇಯರ್‌ಗಳನ್ನು ಆಯ್ಕೆ ಮಾಡಿದ್ದು, ಇವರಿಗೆ ತರಬೇತಿ ನೀಡಲಾಗುತ್ತಿದೆ. ತರಬೇತಿ ಮುಕ್ತಾಯ ಹಂತದಲ್ಲಿದ್ದು, ಇವರನ್ನು ಶೀಘ್ರದಲ್ಲೇ ಖಾಲಿ ಹುದ್ದೆಗಳಿಗೆ ನೇಮಕ ಮಾಡಲಾಗುವುದು.

ಆ) ಸರ್ವೆ ಕೆಲಸ ಬಾಕಿ ಇದ್ದಾಗ್ಯೂ ಸಹ ಸಾಗುವಳಿ ಚೀಟಿಯನ್ನು ನೀಡಲು ನಿಯಮಗಳಲ್ಲಿ ಅವಕಾಶವಿರುತ್ತದೆ. ತಹಶೀಲ್ದಾರ್‌ರು ಸಾಗುವಳಿ ಚೀಟಿಯಲ್ಲಿ ಸರಿಯಾದ ಸರ್ವೇ ನಂಬರ್, ವಿಸ್ತೀರ್ಣ ಮತ್ತು ಗಡಿಯನ್ನು ಗುರುತು ಮಾಡಿ ಪಕ್ಕ ಪೋಡಿ ಮಾತ್ರ ಅವರಿಗೆ ಒಳಪಡಿಸಿ ನೀಡಲು ಕಾನೂನಿನಲ್ಲಿ ಅವಕಾಶ ಮಾಡಲಾಗಿರುತ್ತದೆ.